# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು–570006.

ಆಡಳಿತ ವಿಭಾಗ

## ಕಚೇರಿ ಆದೇಶ

ವಿಷಯ : ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶ (SSP) ಯೋಜನೆಯಡಿ ವಿದ್ಯಾರ್ಥಿವೇತನ ಮಂಜೂರಾತಿ ಮಾಡಲು ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿವೇತನ ಸಬಲೀಕರಣ ಅಧಿಕಾರಿ (Scholarship Empowerment Officer)ಯನ್ನು ನೇಮಿಸುವ ಬಗೆಗೆ.

ಉಲ್ಲೇಖ: 1) ಸರ್ಕಾರದ ಉಪ ಕಾರ್ಯದರ್ಶಿ ಸಮಾಜ ಕಲ್ಯಾಣ ಇಲಾಖೆಯ ಇವರ ಆದೇಶ ಸಂಖ್ಯೆ: ಸಕಇ93ಪಕವಿ2023, ಬೆಂಗಳೂರು, ದಿನಾಂಕ: 07–08–2023.

2) ಸಹಾಯಕ ನಿರ್ದೇಶಕರು (ಗ್ರೇಡ್–1) ಸಮಾಜ ಕಲ್ಯಾಣ ಇಲಾಖೆ, ಮೈಸೂರು ತಾಲ್ಲೂಕು, ಮೈಸೂರು, ಇವರ ಪತ್ರ ಸಂಖ್ಯೆ: ಸ:ಸನಿಗ್ರೇಟ್–1:ಮೈ:ವಿವೇ:ಸಿಆರ್:2023–24, ದಿನಾಂಕ: 21–12–2023.

3) ವಿದ್ಯಾರ್ಥಿವೇತನ ಘಟಕದವರ ಟಿಪ್ಪಣಿ ದಿನಾಂಕ: 17–01–2024.

4) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 10–01–2024.

* * * * *

ಪ್ರಸ್ತಾವನೆ:

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಉಲ್ಲೇಖಿತ (1) ಮತ್ತು (2)ರಲ್ಲಿ 2023–24ನೇ ಸಾಲಿಗೆ SSP ಯೋಜನೆಯಡಿ ವಿದ್ಯಾರ್ಥಿವೇತನ ಮಂಜೂರಾತಿ ಮಾಡುವ ಬಗ್ಗೆ ಯೋಜನಾ ನಿರ್ದೇಶಕರು, ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶ ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ನಡೆದ ವಿಡಿಯೋ ಕಾನ್ಫರೆನ್ಸ್‌ನಲ್ಲಿ ನಿರ್ದೇಶಿಸಿರುವಂತೆ ಕಾಲೇಜು/ ವಿಶ್ವವಿದ್ಯಾನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಆದಾಯ ಮಿತಿ 2.50 ಲಕ್ಷ ರೂಗಳ ಒಳಗೆ ಇರುವಂತಹ ಪರಿಶಿಷ್ಟ ಜಾತಿ/ವರ್ಗದ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿ ಸಲ್ಲಿಸಲು ಹಾಗೂ SSP ಯೋಜನೆಯಡಿ ಉಂಟಾಗುವ ತಾಂತ್ರಿಕ ಸಮಸ್ಯೆ ಬಗೆಹರಿಸಲು ಪ್ರತಿ ಕಾಲೇಜು/ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ **"ವಿದ್ಯಾರ್ಥಿವೇತನ ಸಬಲೀಕರಣ ಅಧಿಕಾರಿ" (Scholarship Empowerment Officer)** ಗಳನ್ನು ನೇಮಕ ಮಾಡಿಕೊಳ್ಳುವಂತೆ ನಿರ್ದೇಶನ ನೀಡಿರುತ್ತಾರೆ. ಈ ಸಂಬಂಧ ಮಾನ್ಯ ಕುಲಪತಿಗಳು ಉಲ್ಲೇಖ (4)ರಲ್ಲಿ **ಡಾ. ಚಿನ್ನಯ್ಯ ಪಿ.ಎಂ.**, ಸಹಾಯಕ ಪ್ರಾಧ್ಯಾಪಕರು, ನಿರ್ವಹಣಶಾಸ್ತ್ರ ಅಧ್ಯಯನ ವಿಭಾಗದ ಜೊತೆಗೆ ಹೆಚ್ಚುವರಿಯಾಗಿ ಕೆಲಸ ನಿರ್ವಹಿಸಲು **"ವಿದ್ಯಾರ್ಥಿವೇತನ ಸಬಲೀಕರಣ ಅಧಿಕಾರಿ" (Scholarship Empowerment Officer)**ಗಳನ್ನಾಗಿ ನೇಮಕ ಮಾಡಲು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಈ ಆದೇಶ ಹೊರಡಿಸಲಾಗಿದೆ.

**ಸಂಖ್ಯೆ: ಕರಾಮುವಿ/ಆವಿ/ಜಿ.ಎಲ್–02/698/2022–23, ದಿನಾಂಕ: 24–01–2024**

ಪ್ರಸ್ತಾವನೆಗೊಳಪಟ್ಟು, ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ SSP ಯೋಜನೆಯಡಿ ವಿದ್ಯಾರ್ಥಿವೇತನ ಮಂಜೂರಾತಿಗೆ ಸಂಬಂಧಪಟ್ಟಂತೆ **ಡಾ. ಚಿನ್ನಯ್ಯ ಪಿ.ಎಂ.**, ಸಹಾಯಕ ಪ್ರಾಧ್ಯಾಪಕರು, ನಿರ್ವಹಣಶಾಸ್ತ್ರ ಅಧ್ಯಯನ ವಿಭಾಗ ಇವರನ್ನು **"ವಿದ್ಯಾರ್ಥಿವೇತನ ಸಬಲೀಕರಣ ಅಧಿಕಾರಿ" (Scholarship Empowerment Officer)** ಯಾಗಿ ನೇಮಿಸಿ ಆದೇಶಿಸಿದೆ.

ಕೂಡಲೇ ಕುಲಸಚಿವರಲ್ಲಿ ಕರ್ತವ್ಯದ ಮೇಲೆ ವರದಿ ಮಾಡಿಕೊಂಡು ಕಾರ್ಯಪ್ರವೃತ್ತರಾಗಲು ಸೂಚಿಸಿದೆ.

ಆದೇಶದ ಮೇರೆಗೆ,

ಕುಲಸಚಿವ 29/01/24

ಗೆ,

ಡಾ. ಚಿನ್ನಯ್ಯ ಪಿ.ಎಂ., ಸಹಾಯಕ ಪ್ರಾಧ್ಯಾಪಕರು, ನಿರ್ವಹಣಶಾಸ್ತ್ರ ಅಧ್ಯಯನ ವಿಭಾಗ, ಕರಾಮುವಿ, ಮೈಸೂರು.

ಪ್ರತಿಗಳು:

1) ಎಲ್ಲಾ ಶಾಸನಬದ್ಧ ಅಧಿಕಾರಿಗಳು, ಕರಾಮುವಿ, ಮೈಸೂರು.
2) ಡೀನ್ (ಅಧ್ಯಯನ ಕೇಂದ್ರ), ಕರಾಮುವಿ, ಮೈಸೂರು.
3) ಮಾನ್ಯ ಕುಲಪತಿಗಳ ಆಪ್ತ ಕಾರ್ಯಾಲಯ, ಕರಾಮುವಿ, ಮೈಸೂರು.
4) ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ, ಮೈಸೂರು.
5) ಸಂಯೋಜನಾಧಿಕಾರಿಗಳು, SC/ST ಘಟಕ, ಕರಾಮುವಿ, ಮೈಸೂರು.
6) ಉಪಕುಲಸಚಿವರು, ಪ್ರವೇಶಾತಿ ವಿಭಾಗ, ಕರಾಮುವಿ, ಮೈಸೂರು.
7) ಎಲ್ಲಾ ಪ್ರಾದೇಶಿಕ ಕೇಂದ್ರಗಳ ನಿರ್ದೇಶಕರು, ಕರಾಮುವಿ, ಮೈಸೂರು.
8) ಡಾ. ನವೀನ್ ಕುಮಾರ್ ಸಿ.ಜಿ., ವೆಬ್‌ಸೈಟ್ ನೋಡಲ್ ಅಧಿಕಾರಿ, ಕರಾಮುವಿ, ಮೈಸೂರು, ಈ ಪ್ರಕಟಣೆಯನ್ನು ವಿ.ವಿ.ನಿಲಯದ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಲಾಗಿದೆ.
9) ಕಛೇರಿ ಪ್ರತಿ.